# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: 2019–20ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನಾ ಪ್ರಾಯೋಜನೆಗಳ ಪರಿಶೀಲನಾ ಸಮಿತಿ ರಚನೆ ಕುರಿತು**

ಓದಲಾಗಿದೆ: 1. ದಿನಾಂಕ: 01.02.2019ರಂದು ನಡೆದ ಆರ್.ಕೆ.ವಿ.ವೈ–ರಫ್ತಾರ್ ಯೋಜನೆಯ ರಾಜ್ಯಮಟ್ಟದ ಪ್ರಾಯೋಜನೆಗಳ ಪಾರಮಾರ್ಶಿಕ ಸಮಿತಿ ಸಭೆಯ ನಡವಳಿ.

2. ಆಯುಕ್ತರು, ಕೃಷಿ ಇಲಾಖೆಯವರ ಪ್ರಸ್ತಾವನೆ ಸಂಖ್ಯೆ: RKVY/DPR's/UAS/1/19-20, ದಿನಾಂಕ: 20.02.2019.

******

ಪ್ರಸ್ತಾವನೆ:

ಮೇಲೆ ಓದಲಾದ (1)ರ ನಡವಳಿಯಲ್ಲಿ, ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಿಂದ RKVY-RAFTAAR ಯೋಜನೆಯಡಿ ಸಲ್ಲಿಕೆಯಾಗುವ ವಿಶೇಷವಾಗಿ ಸಂಶೋಧನಾ ಆಧಾರಿತ ಪ್ರಾಯೋಜನೆಗಳನ್ನು ಪರಿಶೀಲಿಸಿ, ಅನುದಾನಕ್ಕಾಗಿ ಶಿಫಾರಸ್ಸು ಮಾಡಲು ಸಮಿತಿ ರಚಿಸುವಂತೆ ತಿಳಿಸಲಾಗಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಿಂದ RKVY-RAFTAAR ಯೋಜನೆಯಡಿ ಸಲ್ಲಿಕೆಯಾಗುವ ವಿಶೇಷವಾಗಿ ಸಂಶೋಧನಾ ಆಧಾರಿತ ಪ್ರಾಯೋಜನೆಗಳನ್ನು ಪರಿಶೀಲಿಸಿ, ಅನುದಾನಕ್ಕಾಗಿ ಶಿಫಾರಸ್ಸು ಮಾಡಲು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ತಜ್ಞರ ಸಮಿತಿಯನ್ನು ರಚಿಸಿ ಆದೇಶ ಹೊರಡಿಸುವಂತೆ ಕೃಷಿ ಆಯುಕ್ತರ ಪತ್ರದಲ್ಲಿ ಕೋರಲಾಗಿದೆ.

| ಕ್ರ.ಸಂ. | ಸಮಿತಿ ವಿವರ | ಹುದ್ದೆ |
|---|---|---|
| 1 | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ. | ಅಧ್ಯಕ್ಷರು |
| 2 | ಆಯುಕ್ತರು, ಕೃಷಿ ಇಲಾಖೆ. | ಸದಸ್ಯರು |
| 3 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು. | ಸದಸ್ಯರು |
| 4 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ. | ಸದಸ್ಯರು |
| 5 | ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ. | ಸದಸ್ಯರು |
| 6 | ICAR ನವದೆಹಲಿ ಸಂಸ್ಥೆಯ ನಾಮ ನಿರ್ದೇಶಿತ ಸದಸ್ಯರು | ಸದಸ್ಯರು |
| 7 | ನಿರ್ದೇಶಕರು, ಕೃಷಿ ಇಲಾಖೆ. | ಸದಸ್ಯರು |
| 8 | ನಿರ್ದೇಶಕರು, ತೋಟಗಾರಿಕೆ ಇಲಾಖೆ. | ಸದಸ್ಯರು |
| 9 | ನಿರ್ದೇಶಕರು, ಪಶುಸಂಗೋಪನೆ ಇಲಾಖೆ | ಸದಸ್ಯರು |
| 10 | ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ತರಬೇತಿ & ಇ–ಆಡಳಿತ), ಕೃಷಿ ಆಯುಕ್ತಾಲಯ. | ಸದಸ್ಯ ಕಾರ್ಯದರ್ಶಿಗಳು. |

..2...

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 18 ಕೃಉಇ 2019, ಬೆಂಗಳೂರು, ದಿನಾಂಕ 19.03.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ RKVY-RAFTAAR ಯೋಜನೆಯಡಿ ಸಲ್ಲಿಕೆಯಾಗುವ ವಿಶೇಷವಾಗಿ ಸಂಶೋಧನಾ ಆಧಾರಿತ ಪ್ರಾಯೋಜನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅನುದಾನಕ್ಕಾಗಿ ಶಿಫಾರಸ್ಸು ಮಾಡಲು ಸರ್ಕಾರವು ಈ ಕೆಳಕಂಡ ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಿದೆ.

| ಕ್ರಸಂ. | ಸಮಿತಿ ವಿವರ | ಹುದ್ದೆ |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕೃಷಿ ಇಲಾಖೆ. | ಅಧ್ಯಕ್ಷರು |
| 2 | ಆಯುಕ್ತರು, ಕೃಷಿ ಇಲಾಖೆ. | ಸದಸ್ಯರು |
| 3 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು. | ಸದಸ್ಯರು |
| 4 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ. | ಸದಸ್ಯರು |
| 5 | ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ. | ಸದಸ್ಯರು |
| 6 | ICAR ನವದೆಹಲಿ ಸಂಸ್ಥೆಯ ನಾಮ ನಿರ್ದೇಶಿತ ಸದಸ್ಯರು | ಸದಸ್ಯರು |
| 7 | ನಿರ್ದೇಶಕರು, ಕೃಷಿ ಇಲಾಖೆ. | ಸದಸ್ಯರು |
| 8 | ನಿರ್ದೇಶಕರು, ತೋಟಗಾರಿಕೆ ಇಲಾಖೆ. | ಸದಸ್ಯರು |
| 9 | ನಿರ್ದೇಶಕರು, ಪಶುಸಂಗೋಪನೆ ಇಲಾಖೆ | ಸದಸ್ಯರು |
| 10 | ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ತರಬೇತಿ & ಇ-ಆಡಳಿತ), ಕೃಷಿ ಆಯುಕ್ತಾಲಯ. | ಸದಸ್ಯ ಕಾರ್ಯದರ್ಶಿಗಳು. |

ಸಮಿತಿಯು ಅವಶ್ಯಕತೆ ಅನುಸಾರ ಅಗತ್ಯ ಸದಸ್ಯರನ್ನು ವಿಶೇಷ ಆಹ್ವಾನಿತರನ್ನಾಗಿ ಸೇರಿಸಲು ಅನುಮತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

B S Naganathmam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
19/03/19

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
6. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
7. ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು.
8. ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ.
9. ಶ್ರೀ. ಜಿ.ಟಿ ಪುತ್ರ, ಮಾನ್ಯ ಪೌರಾಡಳಿತ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
14. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು), ಕೃಷಿ ಇಲಾಖೆ, ಬೆಂಗಳೂರು.
15. ಶಾಖಾಧಿಕಾರಿ, ಕೃಷಿ-ಬಿ ಶಾಖೆ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ.
16. ಶ್ರೀ. ಎನ್.ಎಸ್. ಸತೀಶ್, ಅಧ್ಯಕ್ಷರು, ಕರ್ನಾಟಕ ಪೀಡೆನಾಶಕ ತಯಾರಕರ ಸಂಘ.
17. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.